KARNATAKA LEGISLATIVE ASSEMBLY RESEARCH AND REFERENCE BRANCH

PAPER CLIPPING

DEPARTMENT / SUBJECT: ಕೋವಿಡ್-19

NAME OF THE NEWSPAPER: ಉದಯವಾಣಿ DATE: 30/6/2020

# ಪ್ಲಾಸ್ಮಾ ಬ್ಯಾಂಕ್ ಮೊರೆ ಹೋದ ದೆಹಲಿ ಸರ್ಕಾರ

## ಮುಖ್ಯಮಂತ್ರಿ ಕೇಜ್ರಿವಾಲ್ ಘೋಷಣೆ

**ನವದೆಹಲಿ:** 83 ಸಾವಿರಕ್ಕೂ ಅಧಿಕ ಕೊರೊನಾ ಪ್ರಕರಣಗಳನ್ನು ಕಂಡಿರುವ ರಾಷ್ಟ್ರರಾಜಧಾನಿ ದೆಹಲಿಯಲ್ಲಿ ಪ್ಲಾಸ್ಮಾ ಬ್ಯಾಂಕ್ ತೆರೆಯುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೋಮವಾರ ಘೋಷಿಸಿದ್ದಾರೆ.

ಇನ್ನೆರಡು ದಿನಗಳಲ್ಲಿಯೇ ಸರ್ಕಾರಿ ಸ್ವಾಮ್ಯದ ಇನ್‌ಸ್ಟಿಟ್ಯೂಟ್ ಆಫ್ ಲಿವರ್ ಆ್ಯಂಡ್ ಬೈಲಿಯರಿ ಸೈನ್ಸಸ್‌ನಲ್ಲಿ ಪ್ಲಾಸ್ಮಾ ಬ್ಯಾಂಕ್ ಕಾರ್ಯಾರಂಭಗೊಳ್ಳಲಿದೆ. ಸೋಂಕಿತನಿಗೆ ಪ್ಲಾಸ್ಮಾ ಅಗತ್ಯವಿದ್ದರೆ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳು ಈ ಸಂಸ್ಥೆಯನ್ನು ಸಂಪರ್ಕಿಸಬಹುದು ಎಂದೂ ಕೇಜ್ರಿವಾಲ್ ನುಡಿದಿದ್ದಾರೆ.



**ಪ್ಲಾಸ್ಮಾ ದಾನಕ್ಕೆ ಕೋರಿಕೆ:** ಕೊರೊನಾ ಸೋಂಕು ಬಂದು ಗುಣಮುಖರಾದ ವ್ಯಕ್ತಿಗಳ ರಕ್ತದಲ್ಲಿನ ಪ್ಲಾಸ್ಮಾ ಕಣಗಳನ್ನು ಸೋಂಕಿತನ ದೇಹಕ್ಕೆ ಸೇರಿಸುವ ಮೂಲಕ ಆತನೂ ಬೇಗನೆ ಗುಣಮುಖವಾಗುವಂತೆ ಮಾಡುವ ಪ್ರಕ್ರಿಯೆಯನ್ನು ಪ್ಲಾಸ್ಮಾ ಥೆರಪಿ ಎನ್ನುತ್ತಾರೆ. ಈಗ ಪ್ಲಾಸ್ಮಾ ಬ್ಯಾಂಕ್ ಸ್ಥಾಪಿಸಬೇಕೆಂದರೆ, ಕೊರೊನಾ ದಿಂದ ಗುಣಮುಖರಾದವರು ಮುಂದೆ ಬಂದು ತಮ್ಮ ದೇಹದಲ್ಲಿನ ಪ್ಲಾಸ್ಮಾವನ್ನು ದಾನ ಮಾಡಬೇಕಾಗುತ್ತದೆ. ಹಾಗಾಗಿ, ದಯವಿಟ್ಟು ಪ್ಲಾಸ್ಮಾ ನೀಡಲು ಮುಂದೆ ಬನ್ನಿ ಎಂದು ಕೇಜ್ರಿವಾಲ್ ಕೋರಿಕೊಂಡಿದ್ದಾರೆ.

### ಜಗತ್ತಿನ ಅತಿದೊಡ್ಡ ಪ್ಲಾಸ್ಮಾ ಯೋಜನೆ ಶುರು

**ಕೊರೊನಾ ಸೋಂಕಿತರನ್ನು ಗುಣಪಡಿಸುವಲ್ಲಿಂಥ ಪ್ಲಾಸ್ಮಾ ಥೆರಪಿಯ ಪ್ರಾಯೋಗಿಕ ಯೋಜನೆ ಶುರುವಾಗಿದೆ. ಜಗತ್ತಿನಲ್ಲೇ ಅತ್ಯಂತ ದೊಡ್ಡ ಮಟ್ಟದ ಪ್ರಯೋಗ ಇದಾಗಿದೆ. ಕಾನ್ವಲಸೆಂಟ್ ಪ್ಲಾಸ್ಮಾ ಥೆರಪಿಯನ್ನು ಪ್ಯಾಸಿವ್ ಆ್ಯಂಟಿಬಾಡಿ ಥೆರಪಿ ಎಂದೂ ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ ಗಂಭೀರ ಸ್ಥಿತಿಯಲ್ಲಿರುವ ಸುಮಾರು 500 ರೋಗಿಗಳ ಜೀವವನ್ನು ಉಳಿಸುವ ಗುರಿಯನ್ನು ಹಾಕಿಕೊಂಡಿದ್ದೇವೆ. ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಬರುವ 17 ಮೆಡಿಕಲ್ ಕಾಲೇಜುಗಳಲ್ಲಿ ಈ ಪ್ರಯೋಗ ನಡೆಯಲಿದೆ ಎಂದೂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಅಲ್ಲದೆ, ಗಂಭೀರ ಸ್ಥಿತಿಯಲ್ಲಿರುವ ಎಲ್ಲ ರೋಗಿಗಳಿಗೂ 200 ಮಿ.ಲೀ.ನ ಎರಡು ಡೋಸ್ ಪ್ಲಾಸ್ಮಾವನ್ನು ಉಚಿತವಾಗಿ ನೀಡಲಾಗುತ್ತದೆ. ಈ ಯೋಜನೆಗೆ ಪ್ರಾಜೆಕ್ಟ್ ಪ್ಲಾಟಿನಾ ಎಂದು ಹೆಸರಿಡಲಾಗಿದೆ.**

**ದೇಶದಲ್ಲೇ ಮೊದಲು:** ಕೊರೊನಾ ರೋಗಿಗಳಿಗೆ ಚಿಕಿತ್ಸೆ ನೀಡಲು ಪ್ಲಾಸ್ಮಾ ಬ್ಯಾಂಕ್ ಸ್ಥಾಪನೆಯಾಗುತ್ತಿರುವುದು ದೇಶದಲ್ಲೇ ಮೊದಲು. ಹಾಗೆಂತ, ಪ್ಲಾಸ್ಮಾ ಥೆರಪಿಯನ್ನು ಸಂಜೀವಿನಿ ಎಂದು ಹೇಳಲಾಗದು ಎಂದಿದ್ದಾರೆ.